

ಏರ್ಪಡಿಸಿದವನು ಪೆಲೋಪ್ಸ್ ಹಾಗೂ ಅದರ ನಿಯಮಗಳನ್ನು ರೂಪಿಸಿದವನು ಹಕ್ರ್ಯುಲಿಸ್ ಎಂದು ಆ ದಂತಕತೆ ಹೇಳುತ್ತದೆ. ಅಷ್ಟೇ ಅಲ್ಲ ಕ್ರೋನೋಸ್ ಪರ್ವತದ ತಪ್ಪಲಲ್ಲಿನ ಆ ಪವಿತ್ರ ಸ್ಥಳವನ್ನು ಆಲ್ಟಿಸ್ ಎಂದು ಕರೆದ. ಇಂದಿಗೂ ಒಲಿಂಪಿಯಾದ ಆ ಸ್ಥಳವನ್ನು ಆಲ್ಟಿಸ್ ಎಂದೇ ಕರೆಯಲಾಗುತ್ತದೆ. ಒಲಿಂಪಿಯಾದಲ್ಲಿದ್ದ ಜ್ಯೂಸ್‌ನ ದೇವಾಲಯದ ಮುಂಭಾಗದ ಮೇಲಿನ 'ಪೆಡಿಮೆಂಟ್'ನಲ್ಲಿ ಇದೇ ಕಥೆಯನ್ನು ನಿರೂಪಿಸುವ ಪ್ರತಿಮೆಗಳಿದ್ದು, ಅವುಗಳನ್ನು ಅಲ್ಲೇ ಇರುವ ಮ್ಯೂಸಿಯಂನಲ್ಲಿ ಇರಿಸಲಾಗಿದೆ.

ಮತ್ತೊಂದು ಕಥೆಯ ಪ್ರಕಾರ, ದೈವಾಂಶ ಸಂಭೂತ ಮಹಾನ್ ಶೂರ ಹಕ್ರ್ಯುಲಿಸ್ ಅಥವಾ ಹೆರಾಕ್ಲೆಸ್ ಈ ಕ್ರೀಡೆಗಳನ್ನು ಪ್ರಾರಂಭಿಸಿದ. ತನಗೆ ವಹಿಸಿದ್ದ ಹನ್ನೆರಡು ಕೆಲಸಗಳ ಜವಾಬ್ದಾರಿಯಲ್ಲಿ ಒಂದನ್ನು ಮುಗಿಸಿದಾಗ ಅಲ್ಲಿ ತನ್ನ ತಂದೆ ಜ್ಯೂಸ್ ದೇವರ ಗೌರವದಲ್ಲಿ ಮೊಟ್ಟ ಮೊದಲ ಕ್ರೀಡೆಗಳನ್ನು ಆಯೋಜಿಸಿದನಂತೆ. ಹೆರಾಕ್ಲೆಸ್ ಒಂದೇ ಉಸಿರಿನಲ್ಲಿ 600 ಹೆಜ್ಜೆ ಓಡಬಲ್ಲವನಾಗಿದ್ದನಂತೆ. ಆ 600 ಹೆಜ್ಜೆಗಳೇ ಗ್ರೀಕ್ ಭಾಷೆಯಲ್ಲಿ ಸ್ಟೇಡಿಯಾನ್ ಅಥವಾ 600 ಹೆಜ್ಜೆಗಳ ದೂರ ಎನ್ನುತ್ತಾರೆ. ಅದರಿಂದಲೇ ಕ್ರೀಡಾಂಗಣಗಳಿಗೆ 'ಸ್ಟೇಡಿಯಂ' ಎಂಬ ಹೆಸರು ಬಂದಿದೆ.

ಈ ದಂತಕತೆಗಳು ಏನೇ ಇದ್ದರೂ ಚರಿತ್ರೆ ಹೇಳುವಂತೆ ಕ್ರಿ.ಪೂ. 776ರಲ್ಲಿ ಯುದ್ಧ ಮಾಡುತ್ತಿದ್ದ ಎಲಿಸ್‌ನ ಹಾಗೂ ಪಕ್ಕದ ಪೀಸಾಗಳ ರಾಜರು ಸಂಧಾನದ ಮೂಲಕ ಯುದ್ಧ ಅಂತ್ಯಗೊಳಿಸುತ್ತಾರೆ. ತಮ್ಮ ಸಂಧಾನದ ಗೌರವಕ್ಕಾಗಿ ಒಲಿಂಪಿಯಾದಲ್ಲಿ ಓಟದ ಸ್ಪರ್ಧೆಗಳನ್ನು ಏರ್ಪಡಿಸುತ್ತಾರೆ ಹಾಗೂ ಎಲಿಸ್‌ನ ಕ್ರೋಬಿಯಸ್ ಎನ್ನುವ ವ್ಯಕ್ತಿ ಮೊಟ್ಟಮೊದಲ ವಿಜೇತನೆನ್ನುತ್ತಾರೆ. ಅಂದಿನಿಂದಲೂ ಪ್ರತಿ ಒಲಿಂಪಿಯಾಡ್‌ನಲ್ಲಿ ಗೆದ್ದ ಸ್ಪರ್ಧಿಗಳ ಹೆಸರುಗಳನ್ನು ದಾಖಲಿಸಿರುವುದನ್ನು ಗ್ರೀಕ್ ಚರಿತ್ರೆಯಲ್ಲಿ ಕಾಣಬಹುದು. ಇಡೀ ಗ್ರೀಸ್‌ನಲ್ಲಿ ಹಂಚಿಹೋಗಿದ್ದ ಗ್ರೀಕ್ ರಾಜ್ಯ, ಪ್ರದೇಶಗಳು (ಸುಮಾರು ಒಂದು ಸಾವಿರವಿದ್ದುವಂತೆ!) ವಿವಿಧ ರಾಜ ಮಹಾರಾಜರ ಆಡಳಿತಗಳನ್ನು ಹೊಂದಿದ್ದರೂ ಅವು ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಏಕರೂಪತೆ ಹೊಂದಿದ್ದವು. ಅವು ಪರಸ್ಪರ ಕಚ್ಚಾಡುತ್ತಿದ್ದುದರಿಂದ ಅವುಗಳನ್ನೆಲ್ಲ ಒಂದುಗೂಡಿಸುವ ಪ್ರಯತ್ನ ಈ ಕ್ರೀಡೆಗಳದಾಗಿತ್ತು ಎನ್ನುತ್ತಾರೆ ಚರಿತ್ರಕಾರರು.

ಒಲಿಂಪಿಯಾದಲ್ಲಿ ಕ್ರೀಡೆಗಳು ಪ್ರಾರಂಭವಾಗುವ ಒಂದು ಸಾವಿರ ವರ್ಷಗಳ ಮೊದಲೇ ಮೆಡಿಟರೇನಿಯನ್ ಸಾಗರದಲ್ಲಿನ ಕ್ರೀಟ್ ದ್ವೀಪದಲ್ಲಿದ್ದ ಮಿನೋವನ್ ನಾಗರಿಕತೆಯಲ್ಲಿ 'ಹೋರಿ ಕಾಳಗ', 'ಕುಸ್ತಿ' ಮುಂತಾದ ಕ್ರೀಡೆಗಳಿದ್ದವು ಹಾಗೂ ಒಲಿಂಪಿಯಾದ ಕ್ರೀಡೆಗಳು ಅವುಗಳ ಅನುಸರಣೆ ಎನ್ನುತ್ತಾರೆ.

ಒಲಿಂಪಿಯಾದಲ್ಲಿ ಜ್ಯೂಸ್ ದೇವನ ಗೌರವಾರ್ಥವಾಗಿ ಕ್ರೀಡೆಗಳು ಪ್ರಾರಂಭವಾದ ನಂತರ ಕ್ರೀಡಾಪ್ರಿಯರಾದ ಗ್ರೀಕರು ಅದೇ ರೀತಿಯ ಕ್ರೀಡೆಗಳನ್ನು ಅಪೊಲೊ ದೇವತೆಯ ಗೌರವಾರ್ಥ ಡೆಲ್ಫಿಯಲ್ಲಿ (ಕ್ರಿ.ಪೂ. 650ರಲ್ಲಿ), ಅಥೀನಾ ದೇವತೆಯ ಗೌರವಾರ್ಥ ಅಥೆನ್ಸ್‌ನಲ್ಲಿ (ಕ್ರಿ.ಪೂ. 566ರಲ್ಲಿ), ಜ್ಯೂಸ್ ದೇವತೆಯ ಗೌರವಾರ್ಥ ನೆಮಿಯಾದಲ್ಲಿ (ಕ್ರಿ.ಪೂ. 573ರಲ್ಲಿ) ಹಾಗೂ ಪಾಸೈಡಾನ್ ದೇವತೆಯ ಗೌರವಾರ್ಥ ಕೊರಿಂಥ್‌ಗಳಲ್ಲಿ (ಕ್ರಿ.ಪೂ. 580ರಲ್ಲಿ) ಸಹ ಕ್ರೀಡೆಗಳನ್ನು ಪ್ರಾರಂಭಿಸುತ್ತಾರೆ. ಈ ಸ್ಥಳಗಳಲ್ಲಿಯೂ ಬೃಹತ್ ಸ್ಟೇಡಿಯಂಗಳಿವೆ. ಆದರೆ ಅವುಗಳಲ್ಲೆಲ್ಲಾ ಹೆಚ್ಚು ಜನಪ್ರಿಯ ಹಾಗೂ ಪ್ರತಿಷ್ಠಿತವಾಗಿದ್ದುದು ಒಲಿಂಪಿಯಾದಲ್ಲಿ ನಡೆಯುತ್ತಿದ್ದ ಕ್ರೀಡಾ ಸ್ಪರ್ಧೆಗಳೇ.



ಕ್ರಿ.ಪೂ. ಸುಮಾರು 550ರ ಗ್ರೀಕ್ ಮಣ್ಣಿನ ಜಾಡಿಯ ಮೇಲೆ ಓಟದ ಸ್ಪರ್ಧೆಯಲ್ಲಿನ ಕ್ರೀಡಾಪಟುಗಳು

## ಆಲಿವ್ ಎಲೆಗಳ ಸಿಂಬೆಯ ಕಿರೀಟ

ಸಣ್ಣ ಪ್ರದೇಶವಾಗಿದ್ದ ಪ್ರಾಚೀನ ಗ್ರೀಸ್‌ನಲ್ಲಿ ಬೃಹತ್ ಪ್ರಮಾಣದಲ್ಲಿ ಈ ರೀತಿಯ ಐದು ಕ್ರೀಡಾ ಸ್ಪರ್ಧೆಗಳನ್ನು ನಡೆಸುತ್ತಿದ್ದುದು ಅವರ ಕ್ರೀಡಾ ಮನೋಭಾವ ತೋರಿಸುತ್ತದೆ. ಕ್ರೀಡೆಗಳಲ್ಲಿ ಗೆದ್ದವರಿಗೆ ಉನ್ನತ ಸಾಮಾಜಿಕ ಸ್ಥಾನಮಾನ, ಗೌರವಗಳೂ ಸಿಗುತ್ತಿದ್ದವು. ಕೆಲವು ಸ್ಪರ್ಧಿಗಳು ಈ ಎಲ್ಲ ಪಂದ್ಯಗಳಲ್ಲಿ ಗೆಲ್ಲುವ 'ಗ್ರ್ಯಾಂಡ್ ಸ್ಲ್ಯಾಮ್' ವಿಜೇತರೂ ಆಗಿರುತ್ತಿದ್ದರು. ಈ ಎಲ್ಲ ವಿಜೇತರಿಗೂ ಸಿಗುತ್ತಿದ್ದ ಪ್ರಶಸ್ತಿ ಆಲಿವ್ ಎಲೆಗಳ ಸಿಂಬೆಯ ಕಿರೀಟ. ಆ ಎಳೆಯ ರೆಂಬೆಗಳನ್ನು ತಾಯಿತಂದೆ ಜೀವಂತವಿರುವ (ಆ ಕಾಲದಲ್ಲಿ ಅದು ಅಪರೂಪವಂತೆ!) ಬಾಲಕನೊಬ್ಬನಿಂದ ಒಲಿಂಪಿಯಾದ ಆಲ್ಟಿಸ್‌ನಲ್ಲಿರುವ ಪವಿತ್ರ ಆಲಿವ್ ಮರದಿಂದ ಚಿನ್ನದ ಕತ್ತಿಯಲ್ಲಿ ಕತ್ತರಿಸಿ ತರಲಾಗುತ್ತಿತ್ತು. ಗೆದ್ದ ಕ್ರೀಡಾಪಟುಗಳು ಪ್ರಖ್ಯಾತರಾಗುತ್ತಿದ್ದರು ಹಾಗೂ ಅವರ ಪ್ರತಿಮೆಗಳನ್ನು ಕೆತ್ತಿ ಅವರ ನಾಡಿನಲ್ಲಿ ಸ್ಥಾಪಿಸಲಾಗುತ್ತಿತ್ತು.

ಸ್ಪರ್ಧೆ ನಡೆಯುವ ಸಮಯದಲ್ಲಿ ಒಲಿಂಪಿಯಾಗೆ ಪ್ರತಿಮೆ ಕೆತ್ತುವ ಶಿಲ್ಪಿಗಳು ಹಾಗೂ ಗೆದ್ದವರ ಕುರಿತು ಕಾವ್ಯ ರಚಿಸಿ ಹಾಡುವ ಕವಿಗಳು (ಹಣಕ್ಕಾಗಿ) ಸಹ ಹಾಜರಿರುತ್ತಿದ್ದರು. ಗೆದ್ದ ಕ್ರೀಡಾಪಟುಗಳ ರಾಜ್ಯ ಅಥವಾ ಪ್ರದೇಶದವರು ವಿಜೇತರಿಗೆ ಜೀವನಪರ್ಯಂತ ಉಚಿತ ಊಟದ ವ್ಯವಸ್ಥೆ, ಚಿನ್ನ, ಜಮೀನು, ಮನೆ ಮುಂತಾದ ಕೊಡುಗೆಗಳನ್ನು ನೀಡುತ್ತಿದ್ದರು. ಅಂಥವರನ್ನು ಊರಿಗೆ ಅತ್ಯಂತ ವಿಜೃಂಭಣೆಯಿಂದ ಸ್ವಾಗತಿಸಿ ಸಂಭ್ರಮಿಸುತ್ತಿದ್ದರು.

ಖ್ಯಾತ ತತ್ವಜ್ಞಾನಿ ಸಾಕ್ರೆಟಿಸ್‌ನಿಗೆ ಮರಣದಂಡನೆ ಶಿಕ್ಷೆ ವಿಧಿಸಿದಾಗ ಆತನ ಕೊನೆಯ ಆಸೆ ಏನು ಎಂದು ಕೇಳಿದಾಗ, 'ಬರೇ ದೇಹ ಬೆಳೆಸಿಕೊಂಡಿರುವ, ಬುದ್ಧಿ ಇಲ್ಲದ ಕ್ರೀಡಾಪಟುಗಳು ಗೆದ್ದಾಗ ಅವರಿಗೆ ಜೀವನಪರ್ಯಂತ ಉಚಿತ ಊಟದ ವ್ಯವಸ್ಥೆ ಮಾಡುವಿರಿ. ನನ್ನಂಥ ಬುದ್ಧಿವಂತನಿಗೆ ಮರಣದಂಡನೆ ವಿಧಿಸುತ್ತಿದ್ದೀರಿ. ಅವರು ನಿಮಗೆ ಸಂತೋಷ ಕೊಡುತ್ತಿದ್ದಾರೆ ಎಂದು ಭಾವಿಸಿದ್ದೀರಿ, ಆದರೆ ನಾನು ನಿಮಗೆ ನಿಮ್ಮ ಬದುಕಿನಲ್ಲಿ ನಿಜವಾದ ಸುಖ ಸಂತೋಷ ನೀಡುತ್ತಿದ್ದೇನೆ. ಅವರಿಗಿಂತ ಈ ಸಮಾಜಕ್ಕೆ ನನ್ನದೇ ಕೊಡುಗೆ ಹೆಚ್ಚಿದೆ. ನನಗೂ ಮರಣದಂಡನೆ ಬದಲು ಆ ರೀತಿ ಉಚಿತ ಊಟದ ವ್ಯವಸ್ಥೆ ಮಾಡಬೇಕು' ಎಂದನಂತೆ. ಆದರೆ ಆಗಿನ ಆಡಳಿತ ಅದನ್ನು ಒಪ್ಪದೆ ಸಾಕ್ರೆಟಿಸ್ ತಾನೇ ಹೆಮ್ಲಾಕ್ ವಿಷ ಕುಡಿದು ಪ್ರಾಣ ಕಳೆದುಕೊಳ್ಳಬೇಕಾದ ಶಿಕ್ಷೆ ನೀಡಿದ್ದು ಎಲ್ಲರಿಗೂ ತಿಳಿದೇ ಇದೆ.

ಕಾಲ ಕಳೆದಂತೆ ಓಟದ ಸ್ಪರ್ಧೆ ಮಾತ್ರವಿದ್ದ